ಎಸ್.ಜಿ. ರಾಜಶೇಖರರೆಡ್ಡಿ, ಗೌರಿಬಿದನೂರು

*ತಿರುಮಲ ತಿರುಪತಿ ತಿಮ್ಮಪ್ಪನ ಮೂರು ನಾಮಗಳು ಸಿಕ್ಕಾಪಟ್ಟೆ ಫೇಮಸ್ ಏಕೆ?*



ನಾಮ ಹಾಕುವವರಿಗೆ, ಹಾಕಿಸಿಕೊಂಡವರಿಗೆ, ಬೇ–ನಾಮಿಗಳಿಗೆ ನಾಮದ ಬಲವೇ ಆಧಾರವಾದ್ದರಿಂದ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಜನ್ಮಜನ್ಮಕ್ಕೂ ನೀವೇ ಪತಿಯಾಗಬೇಕೆಂದು ಬಯಸುವ ಸತಿಗೂ, ಇನ್ನೊಂದು ಜನ್ಮ ಬೇಡವೆಂದು ಹೇಳುವ ಪತಿಗೂ ಇರುವ ವ್ಯತ್ಯಾಸ?*

ಇನ್ನೂ ಸರಿಯಾಗಿ ನಿಮ್ಮ ಜನ್ಮ ಜಾಲಾಡಬೇಕು ಎಂಬುದು ಅವಳ ಅಭಿಪ್ರಾಯ, ಒಂದೇ ಜನ್ಮಕ್ಕೆ ಏಳೂ ಜನ್ಮಗಳಷ್ಟು ಜಾಲಾಡಿದ್ದಾಳೆ ಎಂಬುದು ಇವನ ಅಭಿಪ್ರಾಯ.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಆಸ್ತಿ: ಇದರ ನಿಜವಾದ ಅರ್ಥ?*

ನಾಸ್ತಿ ಆಗುವ ಮುಂಚಿನ ಸ್ಥಿತಿ!

ವಿರಾಜ್ ಅಡೂರು, ಅಡೂರು

*ದುಷ್ಟ ಸಜ್ಜನನಾದರೆ ಪರಿವರ್ತನೆ ಎನ್ನಬಹುದು. ದುಷ್ಟ ರಾಜಕಾರಣಿ ಆದರೆ...?*

ನರಿ ವರ್ತನೆ!

ರಾಯಲಪಾಡು ರಾಘವೇಂದ್ರರಾವ್, ಕೋಲಾರ

*ಶೋಧ ಮಾಡುತ್ತಾ ಹೋದರೆ ಮನಸ್ಸಿನಾಳದಲ್ಲಿ ಏನು ಸಿಗಬಹುದೆಂದು ನಿಮ್ಮ ಊಹೆ?*

ಬ್ರೇಕಿಂಗ್ ನ್ಯೂಸ್ ಆಗಲು ಯೋಗ್ಯವಾದ ಗುಪ್ತ ವಿಚಾರಗಳು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಗಂಗೆಯಲ್ಲಿ ಮುಳುಗಿದವರಿಗೆ ಪಾಪ ಹೋಗುತ್ತೆ, ರಾಜಕೀಯದಲ್ಲಿ ಮುಳುಗಿದವರಿಗೆ?*



ಪಾಪಪ್ರಜ್ಞೆಯೇ ಹೊರಟುಹೋಗುತ್ತದೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಶಿವನು ಬೂದಿಬಡುಕ, ತಿರುಕ, ಸ್ಮಶಾನವಾಸಿಯಾಗಿದ್ದರೂ ಪಾರ್ವತಿ ಅವನನ್ನೇಕೆ ಮದುವೆಯಾದಳು?*

ಯೋಗ, ಡ್ಯಾನ್ಸ್, ಧ್ಯಾನ ಬಲ್ಲವರು ಎಲ್ಲಿದ್ದರೂ ಉದ್ಧಾರವಾಗುತ್ತಾರೆಂದು ಪಾರ್ವತಿಗೆ ಆಗಲೇ ತಿಳಿದಿತ್ತು!

ಎಂ.ಎನ್. ಸೋಮಶೇಖರ್, ಮೈಸೂರು

*ವಿಶ್ವದಲ್ಲಿ ಸ್ತ್ರೀಯರ ಕನಿಷ್ಠ ಎತ್ತರ 7 ಅಡಿ, ಪುರುಷರ ಗರಿಷ್ಠ ಎತ್ತರ 2.5 ಅಡಿ ಇದ್ದಿದ್ದರೆ ಜೀವನ ಹೇಗೆ ಸಾಗುತ್ತಿತ್ತು?*

ಹೆಣ್ಣಿನ ನೆರಳಿನಲ್ಲಿ ಗಂಡು ಆರಾಮವಾಗಿ ಇದ್ದುಬಿಡುತ್ತಿದ್ದ!

ಕಂಡಕ್ಟರ್ ರಾಜು, ಗುಬ್ಬಿ

*ಹುಡುಗಿಯರಿಗೆ ಚಾಕಲೇಟ್, ಐಸ್‌ಕ್ರೀಂ ಇಷ್ಟ; ಏಕೆ?*

ಅವರ ಸಿಹಿಯಾದ ಭಾವನೆಗಳು, ಬೆಚ್ಚನೆಯ, ಪ್ರೀತಿಗೆ ಕರಗುವ ಹೃದಯಕ್ಕೆ, ಇವೇ ಮ್ಯಾಚಿಂಗ್!

ಶಿವಕುಮಾರ ಪತ್ರಿಮಠ, ಶೋರಾಪುರ

*ನಾಡಿನಲ್ಲಿ ಇರುವುದಕ್ಕೂ, ಕಾಡಿನಲ್ಲಿ ಇರುವುದಕ್ಕೂ ಏನು ವ್ಯತ್ಯಾಸ?*

ನಾಡಿನಲ್ಲಿ ಮರಗಟ್ಟಿದ ಜೀವನ; ಕಾಡಿನಲ್ಲಿ ಮರಮರಗಳಲ್ಲೂ ಜೀವ– ನಾಡಿಗೆ ಸ್ಪಂದನ!

ಎಸ್.ಎ. ಮೋಹನರಾಜು, ಶಿವಮೊಗ್ಗ

*ಸೀರೆ ಮಹಿಳೆಯರಿಗೆ ಶೋಭೆ. ಜೀನ್ಸ್, ಚೂಡಿದಾರ್ ಯಾರಿಗೆ ಶೋಭೆ?*

ಜೀನ್ಸ್ ಬಳುಕು ಸೊಂಟಗಳಿಗೆ, ಚೂಡಿದಾರ್ ಟೈರ್‌ಸೊಂಟಗಳಿಗೆ!

ಮಲ್ಲಿಕಾರ್ಜುನ ಆರ್. ಹುಲಗಬಾಳಿ, ಬನಹಟ್ಟಿ

*ತಮ್ಮ ದೃಷ್ಟಿಯಲ್ಲಿ ನಿಜವಾದ ಕನ್ನಡದ ರಕ್ಷಕರು ಹೇಗಿರಬೇಕು?*

ಕತ್ತಿ ಎತ್ತಿ ಚಂದಾ ಕಿತ್ತು ಸ್ವಂತ ಬೆಳೆಯುವುದಕ್ಕಿಂತ ನುಡಿ ಕಲಿತು, ನಡೆ ಅರಿತು ನಾಡು ಬೆಳೆಸಬೇಕು.

ಜಾಕೋಬ್ ಡಿಸೋಜ, ಕುರುವಳ್ಳಿ

*ಸತ್ಯ ಬಾಗಬಹುದು, ಆದರೆ ಮುರಿಯಲಾರದು ಅಂತಾರಲ್ಲಾ?*

ನಿಜವೇ. ಬಾಗಿಸಲು ಹಲವಾರು ವಕೀಲರಿದ್ದಾರೆ, ಆದರೆ ಮರಿಯಲಾಗದಂತೆ ಕಾನೂನು ಕಾಪಾಡಿದೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ನಮ್ಮೂರಿಗೆ ನಿಮ್ಮನ್ನು ಆಹ್ವಾನಿಸಬೇಕೆಂದುಕೊಂಡಿದ್ದೇನೆ. ಬರುವಿರಿ ತಾನೆ?*

ಅಲ್ಲಿಗೆ ಬರಲು ಹೆದರಲು ನಾನೇನು ಮುಖ್ಯಮಂತ್ರಿಯೆ? ಖಂಡಿತ ಬರುತ್ತೇನೆ.

ಮಾಲತಿರಾಜು, ಬೆಂಗಳೂರು

*ಗಳಿಸಿದ್ದೆಲ್ಲವನ್ನೂ ಉಳಿಸಲಿಕ್ಕೆ ಏನು ಮಾಡಬೇಕು?*

ಒಳ್ಳೆಯ ಹೆಸರು ಗಳಿಸಿ. ಮಿಕ್ಕವೆಲ್ಲಾ ತಾವಾಗೇ ಉಳಿಯುತ್ತವೆ!

## ಬಹುಮಾನಿತ ಪ್ರಶ್ನೆ

ದೇಶವಳ್ಳಿ ಶಿವು, ಸಂತೇಮರಹಳ್ಳಿ

*ಪ್ರೇಯಸಿಗೆ ಗುಲಾಬಿ, ಪತ್ನಿಗೆ ಮಲ್ಲಿಗೆ ಕೊಡುವುದರ ಗುಟ್ಟೇನು?*

ಲಾಬಿ ಮಾಡದಿದ್ದರೆ ಕೈತಪ್ಪಿ ಹೋಗುವವಳಿಗೆ ಗುಲಾಬಿ, ಮೆಲ್ಲಗೆ ಹೊಂದಿಕೊಂಡು ಹೋಗುವವಳಿಗೆ ಮಲ್ಲಿಗೆ!

ಓಂಕುಮಾರಸ್ವಾಮಿ, ಬೀದರ್

*ಜಗತ್ತಿನ ಶ್ರೇಷ್ಠ ವ್ಯಕ್ತಿ ಯಾರು?*

ಅಮ್ಮ!

ಎಂ.ಎಸ್. ಧರ್ಮೇಂದ್ರ, ಜಿ.ಟಿ.ಆರ್.ಇ. ಕ್ಯಾಂಪಸ್

*ಬ್ರಾಂದಿಗೂ, ಭ್ರಾಂತಿಗೂ ಏನು ವ್ಯತ್ಯಾಸ?*

ಬ್ರಾಂದಿ ದುರ್ವಾಸನೆ, ಭ್ರಾಂತಿ ದುರ್ಯೋಚನೆ!

ಗೀತಾ ಬರ್ಲ, ಬೆಂಗಳೂರು

*ಬೇಕಾದ್ದೆಲ್ಲಾ ತಿನ್ನಲು ಧನಿಕನಾದವನಿಗೆ ಆರೋಗ್ಯವಿರುವುದಿಲ್ಲ, ಆರೋಗ್ಯವಂತನಿಗೆ ಹಣವಿರುವುದಿಲ್ಲ. ಇದೆಂತಹ ವಿಪರ್ಯಾಸ?*



ವಿಪರ್ಯಾಸವೇನಿಲ್ಲ; ಹಣದ ಹಿಂದೆ ಹೋದರೆ ಆರೋಗ್ಯ ಛಟ್, ಹಣ ಇಲ್ಲದಿರುವುದರಿಂದಲೇ ಇವನಲ್ಲಿ ಆರೋಗ್ಯ!

ಮುರಲೀಧರ ಕುಲಕರ್ಣಿ, ಬೀದರ್

*ಹೆಂಡತಿ ಮತ್ತು ಮೊಬೈಲ್‌ನಲ್ಲಿರುವ ಸಾಮ್ಯವೇನು?*

ರಿಂಗ್ ಟೋನ್ ಯಾವ ಹೊತ್ತಿನಲ್ಲಿ ಕರೆ ಬಂದರೂ ಉತ್ತರಿಸಲೇಬೇಕು, ಇಲ್ಲದಿದ್ದರೆ ಹೊಡೆದುಕೊಳ್ಳುತ್ತಲೇ ಇರುತ್ತದೆ!

ಎಚ್.ಆರ್. ದೇಸಾಯಿ, ರಾಯಚೂರು

*ಮನುಷ್ಯ ಜೀವನದಲ್ಲಿ ಅನುಭವಿಸುವ ಅತ್ಯಂತ ಕಠಿಣ ಶಿಕ್ಷೆ ಯಾವುದು?*

ಪ್ರೀತಿ ಕೊಟ್ಟು ದ್ವೇಷ ಪಡೆಯುವುದು!

ವಿರಾಜ್ ಅಡೂರು, ಕಾಸರಗೋಡು

*ಗಾಂಧೀಜಿಗೂ, ಅಣ್ಣಾ ಹಜಾರೆಗೂ ಇರುವ ವ್ಯತ್ಯಾಸವೇನು?*

ಗಾಂಧೀಜಿ ರಾಷ್ಟ್ರಕ್ಕೇ ಪಿತ, ಅಣ್ಣಾ ಹಜಾರೆ ರಾಷ್ಟ್ರಕ್ಕೇ ಪಿತ್ಥ ಎಂದನೊಬ್ಬ ಭ್ರಷ್ಟಾಚಾರಿ!

■ ರಾಮ್